# ವಾರ್ತಾ ವಿಶ್ಲೇಷಣೆ

## ಮಿದುಳಿನಲ್ಲಿ ಧ್ಯಾನಕೇಂದ್ರ

**ಇತ್ತೀಚಿನ** ದಿನಗಳಲ್ಲಿ ಧ್ಯಾನ ಹೆಚ್ಚು ಅನುಧ್ಯಾನಕ್ಕೆ ಒಳಗಾಗಿದೆ. ವಿಜ್ಞಾನಿಗಳು ಕೂಡ ಅದರ ಕಡೆ ಹೆಚ್ಚು ಗಮನ ಹರಿಸುತ್ತಿದ್ದಾರೆ. ವಿಶೇಷವಾಗಿ ನರತಜ್ಞರು ಧ್ಯಾನದ ಸಮಯದಲ್ಲಿ ಮಿದುಳಿನಲ್ಲಾಗುವ ಬದಲಾವಣೆಗಳನ್ನು ಪ್ರಾಯೋಗಿಕವಾಗಿ ಅಧ್ಯಯನ ಮಾಡುತ್ತಿದ್ದಾರೆ. ಹೀಗೆ ನ್ಯೂರೊಥಿಯಾಲಜಿ (Neuro-theology) ಎಂಬ ಹೊಸ ವೈಜ್ಞಾನಿಕ ಕ್ಷೇತ್ರವೇ ಬೆಳಕಿಗೆ ಬರುತ್ತಿದೆ. ಧರ್ಮವೂ ವೈಜ್ಞಾನಿಕವಾದುದು, ಅದನ್ನು ಹೆಚ್ಚು ಹೆಚ್ಚು ವೈಜ್ಞಾನಿಕ ಸಂಶೋಧನೆಗಳಿಗೆ ಒಳಪಡಿಸಬೇಕು ಎಂಬ ಸ್ವಾಮಿ ವಿವೇಕಾನಂದರ ಮಾತು ಈಗ ಹೆಚ್ಚು ಸತ್ಯವಾಗುತ್ತಿದೆ.

ಮೇಲಿನ ಮಿದುಳಿನ ಹಿಂಭಾಗದ ಒಂದು ಪ್ರದೇಶವು ಧ್ಯಾನಕ್ಕೆ ಸಂಬಂಧಪಟ್ಟುದೆಂದು *Newsweek* ವರದಿ ಮಾಡುತ್ತದೆ. ಇಂದ್ರಿಯ ವಿಷಯಗಳಿಗೆ ಸಂಬಂಧಪಟ್ಟ ಭಾವನೆಗಳ ಹೆಣೆಯುವಿಕೆ ಇಲ್ಲಿಯೇ ಆಗುವುದಂತೆ. ಧ್ಯಾನದ ಸಮಯದಲ್ಲಿ ಆಲೋಚನೆಗಳೆಲ್ಲ ನಿಗ್ರಹವಾದಾಗ, ವಿಷಯವಸ್ತುಗಳಾವುವೂ ಇಲ್ಲದಿರುವುದರಿಂದ ಈ ಪ್ರದೇಶವು ಆತ್ಮನ ದರ್ಶನ ಮಾಡಿಸುತ್ತದೆ. ಅದೆಂಥ ಆತ್ಮವೊ ದೇವರೇ ಬಲ್ಲ! ಎಲ್ಲವನ್ನೂ ಭೌತಿಕ ಮಟ್ಟಕ್ಕೆ ಎಳೆಯುವ ಪ್ರವೃತ್ತಿ ಹೆಚ್ಚಾಗುತ್ತಿರುವ ಇಂದಿನ ದಿನಗಳಲ್ಲಿ ಧ್ಯಾನವನ್ನೂ ಒಂದು ಭೌತಿಕ ಕ್ರಿಯೆಯಾಗಿ ಮಾರ್ಪಡಿಸುವುದರಲ್ಲಿ ಆಶ್ಚರ್ಯವೇನಿಲ್ಲ. ಯಾವುದಾದರೂ ಕೃತಕ ಸಾಧನದಿಂದ ಚಿತ್ತವೃತ್ತಿಗಳನ್ನು ನಿರೋಧಿಸುವ ವಿಧಾನವನ್ನು ಮುಂದೆ ಕಂಡುಹಿಡಿಯಬಹುದು. ಆಗ ಸಜ್ಜನರು ಮತ್ತು ದುರ್ಜನರು ಎಲ್ಲರಿಗೂ ಧ್ಯಾನಸಿದ್ಧಿಯಾಗಬಹುದು. ಆದರೆ ಹಳೆಯ ಸಂಸ್ಕಾರಗಳ ಗತಿಯೇನು? ಅವುಗಳನ್ನು ನಾಶಮಾಡುವುದಕ್ಕೂ ಯಾವುದಾದರೂ ಡ್ರಗ್ಗನ್ನು ಕಂಡುಹಿಡಿಯಬಹುದು. ಆಗ ಎಲ್ಲರೂ ಸಂತರೇ ಆಗಬಹುದು. ಇದೇ ಸತ್ಯಯುಗ ತಾನೆ!

ಆಧ್ಯಾತ್ಮಿಕ ಅನುಭವಗಳೆಂದರೆ ಕೇವಲ ಮಿದುಳಿನಲ್ಲಾಗುವ ಕೆಲವು ಬದಲಾವಣೆಯೇ ಅಥವಾ ಅವುಗಳಿಗೆ ಸಂಬಂಧಿಸಿದ ಬೇರೊಂದು ಸತ್ಯವಿದೆಯೇ? ಎಂಬುದು ಪ್ರಶ್ನೆ. ನರತಜ್ಞರಾದ ಡಾ. ಆಂಡ್ರಿವ್ ನ್ಯೂಬರ್ಗ್ (Andrew Newberg) ಹೇಳುತ್ತಾರೆ : "ಆಧ್ಯಾತ್ಮಿಕ ಅನುಭವಗಳಿಗೂ ನರಕ್ರಿಯೆಗಳಿಗೂ ನಿರ್ದಿಷ್ಟ ಸಂಬಂಧವಿದೆ ಎಂದ ಮಾತ್ರಕ್ಕೆ ಅಂತಹ ಅನುಭವಗಳು ನರಸಂಬಂಧಿಯ ಭ್ರಮೆಗಳೆಂದು ಹೇಳಲಾಗುವುದಿಲ್ಲ. ಆಧ್ಯಾತ್ಮಿಕ ಪ್ರೇರಣೆ ಮತ್ತು ಅನುಭವಗಳಿಗೆ ಮಿದುಳಿನ ಕ್ರಿಯೆಗಳೇ ಕಾರಣ ಎನ್ನುವುದು, ನಾವು ಸೇಬಿನ ಹಣ್ಣನ್ನು ತಿಂದಾಗ ಉಂಟಾಗುವ ಸುಖಾನುಭವಕ್ಕೆ ಸಂಬಂಧಿಸಿದ ನರಕ್ರಿಯೆಗಳೇ ಸೇಬಿನ ಅಸ್ತಿತ್ವಕ್ಕೆ ಕಾರಣ ಎಂದಂತಾಗುತ್ತದೆ." ಆದ್ದರಿಂದ ಆಧ್ಯಾತ್ಮಿಕ ಸತ್ಯಗಳ ಅನುಭವ ಕೆಲವು ನರಕ್ರಿಯೆಗಳನ್ನು ಉಂಟುಮಾಡಬಹುದು, ಆದರೆ ಅವುಗಳೇ ಆ ಅನುಭವಕ್ಕೆ ಕಾರಣ ಎನ್ನಲಾಗುವುದಿಲ್ಲ. ಮಿದುಳಿನ ಕ್ರಿಯೆಗಳನ್ನೂ ಮೀರಿದ ಆಧ್ಯಾತ್ಮಿಕ ಸತ್ಯವಿದೆ ಎಂಬುದು ಸ್ಪಷ್ಟ. ❑

## ನಮ್ಮ ಪೂರ್ವಸ್ಥಾನ

**ಆರ್ಯರು** ಭಾರತಕ್ಕೆ ಹೊರಗಿನಿಂದ ಬಂದರು ಎಂದು ಹಿಂದೆ ಹೇಳಲಾಗುತ್ತಿತ್ತು. ಈಗ ಇತಿಹಾಸಕಾರರು ಅನೇಕ ಪ್ರಾಕ್ತನ ಶಾಸ್ತ್ರ ಪುರಾವೆಗಳ ಮೂಲಕ ಆರ್ಯರು ಇಲ್ಲಿಯೇ ಇದ್ದರು, ಹೊರಗಿನಿಂದ ಬಂದವರಲ್ಲ ಎಂದು ಸಾಧಿಸುತ್ತಿದ್ದಾರೆ. ಇದರಿಂದ ನಾವು ಮೂಲತಃ ಭಾರತೀಯರೆ, ಭಾರತವೇ ನಾವು ಹುಟ್ಟಿ (ಎಂದಾದರೂ ಆಗಲಿ) ಬೆಳೆದ ದೇಶ ಎಂದು ಹೇಳಿಕೊಳ್ಳಬಹುದು. ಆದರೆ ವಿಜ್ಞಾನಿಗಳು ಹಾಗೆ ಹೇಳಿಕೊಳ್ಳುವುದಕ್ಕೆ ಬಿಡುವುದಿಲ್ಲ. ಅವರ ಪ್ರಕಾರ ಹಾಗೆ ಹೇಳಿಕೊಳ್ಳುವ ಅಧಿಕಾರ ಆಫ್ರಿಕನರನ್ನು ಬಿಟ್ಟರೆ ಮತ್ತೆ ಯಾವ ದೇಶದವರಿಗೂ ಇಲ್ಲ. ನಮ್ಮೆಲ್ಲರ ಮೂಲಸ್ಥಾನ ಆಫ್ರಿಕ ಖಂಡವಂತೆ. ಇದನ್ನು ಕೇಳಿ ಅನೇಕರ ಜನಾಂಗಾಭಿಮಾನಕ್ಕೆ ಧಕ್ಕೆ ಉಂಟಾಗಬಹುದು. ಹಾಗಾಗುವುದು ಒಳ್ಳೆಯದೇ. ಈ ಅಭಿಮಾನವೇ ಅನೇಕ ಜನಾಂಗೀಯ ಯುದ್ಧಗಳಿಗೆ ಕಾರಣವಾಗಿದೆ.

ಈಗ DNA ವಿಶ್ಲೇಷಣೆಯ ಮೂಲಕ ಒಂದು ಜನಾಂಗದ ಮೂಲವನ್ನು ಕಂಡು ಹಿಡಿಯಲು ವಿಜ್ಞಾನಿಗಳಿಗೆ ಸಾಧ್ಯವಾಗಿದೆ. ಜನಾಂಗೀಯ ಲಕ್ಷಣಗಳು ಜೀನ್(gene)ಗಳ ಮೂಲಕ ವಂಶ ಪಾರಂಪರ್ಯವಾಗಿ ಹರಿದು ಬರುತ್ತವೆ. ಮೂಲ ಲಕ್ಷಣಗಳಾವುವು, ಅವು ಮುಂದೆ ಹೇಗೆ ಮತ್ತು ಯಾವಾಗ ಬದಲಾವಣೆ ಹೊಂದಿದವು ಎಂಬುದನ್ನೆಲ್ಲ ಅಧ್ಯಯನ ಮಾಡಬಹುದು. ಈಗಿರುವ ಎಲ್ಲ ಜನಾಂಗಗಳ ಜೀನ್‌ಗಳ ತುಲನಾತ್ಮಕ ಅಧ್ಯಯನದ ಫಲವಾಗಿ ಎಲ್ಲ ಜನಾಂಗಗಳ ಮೂಲವನ್ನು ಕಂಡುಹಿಡಿಯಲು ಅವರಿಗೆ ಸಾಧ್ಯವಾಗಿದೆ. ಈ DNA ಸಂಶೋಧನೆಯ ಪ್ರಕಾರ ಇಡೀ ಮಾನವ ಜನಾಂಗ ಮೂಲತಃ ಪೂರ್ವ ಆಫ್ರಿಕದಿಂದ ವಲಸೆ ಬಂದಿತಂತೆ. ಸುಮಾರು ೫೦,೦೦೦ ವರ್ಷಗಳಿಗೂ ಹಿಂದಿನಿಂದಲೇ ಜನರು ಅಲ್ಲಿಂದ ವಲಸೆ ಹೊರಟು ಯೂರೋಪು, ಅಮೆರಿಕ, ಆಸ್ಟ್ರೇಲಿಯ ಮತ್ತು ಏಷ್ಯಾದೇಶಗಳಲ್ಲಿ ಬಂದು ನೆಲಸತೊಡಗಿದರು. ಅನಂತರ ಆಯಾಯ ಪ್ರದೇಶಗಳ ಹವಾಗುಣಕ್ಕೆ ಅನುಗುಣವಾಗಿ ಮಾನವರ ಲಕ್ಷಣಗಳೂ ಬದಲಾದವು ಮತ್ತು ಬೇರೆ ಬೇರೆ ನಾಗರಿಕತೆಗಳು ಉದ್ಭವಿಸಿದವು. ಇಂದಿನ ಜಾಗತೀಕರಣದ ಈ ಸಂದರ್ಭದಲ್ಲಿ ನಾವೆಲ್ಲರೂ ಮೂಲತಃ ಒಂದೇ ಜನಾಂಗಕ್ಕೆ ಸೇರಿದವರು, ಒಂದೇ ಕುಟುಂಬಕ್ಕೆ ಸೇರಿದವರು ಎಂಬ ಅರಿವು ಜನಾಂಗೀಯ ದ್ವೇಷಕ್ಕೆ ದಿವ್ಯೌಷಧಿಯಾಗಬಹುದೆ?

ಸ್ವಾಮಿ ವಿವೇಕಾನಂದರ ಬಗ್ಗೆ ಅಮೆರಿಕನ್ ಪತ್ರಿಕಾ ವರದಿಯೊಂದು ಹೀಗೆ ಹೇಳುತ್ತದೆ : "ಸಮುದ್ರದ ಆಚೆಗಿರುವ, ಬಹು ದೂರವಿರುವ, ನಮ್ಮ ಎಲ್ಲ ನೆರೆಹೊರೆಯವರೂ ನಮ್ಮ ರಕ್ತ ಬಾಂಧವರು (cousins), ಅಲ್ಲಿ ವ್ಯತ್ಯಾಸವಿರುವುದು ವರ್ಣ, ಭಾಷೆ, ಪದ್ಧತಿ ಮತ್ತು ಧರ್ಮಗಳಲ್ಲಿ ಮಾತ್ರ ಎಂದು ಸ್ವಾಮಿ ವಿವೇಕಾನಂದರು ನಿರ್ಣಾಯಕವಾಗಿ ಪ್ರಮಾಣೀಕರಿಸಿದ್ದಾರೆ." ಇದನ್ನೇ ಈಗ ವೈಜ್ಞಾನಿಕವಾಗಿ ಪ್ರಮಾಣೀಕರಿಸಲಾಗುತ್ತಿದೆ. ❑